1	2	3
4. -ಅದೇ-ರಸ್ತೆಯ 169.00 ರಿಂದ 170.00 ವರೆಗೆ -ಅದೇ-	3.00	15.68 ಟನ್
5. -ಅದೇ-ರಸ್ತೆಯ 168.00 ರಿಂದ 169.00 -ಅದೇ-	3.00	15.71 ಟನ್
6. -ಅದೇ-ರಸ್ತೆಯ 150.00 ರಿಂದ 151.00 -ಅದೇ-	3.00	14.55 ಟನ್
7. -ಅದೇ-ರಸ್ತೆಯ 157.00 ರಿಂದ 158.00 ರವರೆಗೆ -ಅದೇ-	4.00	17.92 ಟನ್
8. -ಅದೇ-ರಸ್ತೆಯ 148.50 ರಿಂದ 149.50 ರವರೆಗೆ -ಅದೇ-	4.00	17.63 ಟನ್
9. -ಅದೇ- ರಸ್ತೆಯ 153.00 ರಿಂದ 154.00 ರವರೆಗೆ -ಅದೇ-	4.00	17.86 ಟನ್
ಒಟ್ಟು	**30.00**	**144.82 ಟನ್**

ಬಾಲ ಕಾರ್ಮಿಕರ ಸಮೀಕ್ಷೆ ಕಾರ್ಯ

771 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ರಾಜ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಳ್ಳಾರಿ ಜಿಲ್ಲೆಯಲ್ಲಿರುವ ಬಾಲ ಕಾರ್ಮಿಕರ ಸಮೀಕ್ಷೆ ಕಾರ್ಯವನ್ನು ಸರ್ಕಾರದವರು ಕೈಗೊಂಡಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಈ ಸಮೀಕ್ಷೆ ಕಾರ್ಯವನ್ನು ಯಾವಾಗ ಕೈಗೊಳ್ಳಲಾಯಿತು?*

ಇ) *ಎಷ್ಟು ಬಾಲ ಕಾರ್ಮಿಕರನ್ನು ಈ ಜಿಲ್ಲೆಯಲ್ಲಿ ಗುರುತಿಸಲಾಗಿದೆ?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಹೌದು.

ಆ) ದಿ. 15.4.97 ರಿಂದ 15.5.97ರ ವರೆಗೆ ಕೈಗೊಳ್ಳಲಾಯಿತು.

ಇ)

ಅಪಾಯಕಾರಿ ಉದ್ದಿಮೆಗಳಲ್ಲಿ	3801
ಅಪಾಯಕಾರಿ ಅಲ್ಲದ ಉದ್ದಿಮೆಗಳಲ್ಲಿ	4396
ಒಟ್ಟು	**8197**

ಕೇಂದ್ರ ಸ್ವಾಮ್ಯದ ಎಂ.ಎಂ.ಟಿ.ಸಿ. ಯಿಂದ ರಸ್ತೆ ಅಭಿವೃದ್ಧಿ ಹಣ

772 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಳ್ಳಾರಿ ಜಿಲ್ಲೆಯಲ್ಲಿರುವ ಕೇಂದ್ರ ಸ್ವಾಮ್ಯದ ಎಂ.ಎಂ.ಟಿ.ಸಿ.ಯಿಂದ ರಾಜ್ಯದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?*